ಎಂ.ವಿ.ಸಿ. ನಂ. 430/2022 ಪಿಡಬ್ಲ್ಯೂ -1

(ಇಂದು ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು 4ನೇ ಎದುರುದಾರರ ಪರ ಶ್ರೀ ವಿ.ಆರ್.ಎಮ್. ವಕೀಲರಿಂದಃ**

ನಾನು ಸರ್ಕಾರಿ ಶಿಕ್ಷಕ ವೃತ್ತಿಯನ್ನು ನಿರ್ವಹಿಸುತ್ತೇನೆ. ನಾನು ಮೊದಲಿನಂತೆ ಈಗಲೂ ಶಿಕ್ಷಕ ವೃತ್ತಿಯನ್ನು ಮಾಡುತ್ತಾ ಇರುತ್ತೇನೆ. ಈ ಅಪಘಾತದಿಂದ ನನ್ನ ವೃತ್ತಿಗೆ ಆರ್ಥಿಕ ಹಾನಿ ಉಂಟಾದ ಬಗ್ಗೆ ದಾಖಲಾತಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದಾಗ ನನ್ನ ನಿವ್ವಳ ಸಂಬಳ 55,000/-. ಪ್ರಸ್ತುತ 84,000/- ಇರುತ್ತದೆ. ಅಪಘಾತವಾದಾಗ ನಾನು ಪ್ರಭಾರ ಮುಖ್ಯ ಶಿಕ್ಷಕನಾಗಿದ್ದೆ. ಪ್ರಸ್ತುತ ನಮ್ಮ ಶಾಲೆಯಲ್ಲಿ ಖಾಯಂ ಮುಖ್ಯ ಶಿಕ್ಷಕರನ್ನು ನೇಮಕ ಮಾಡಿದ್ದರಿಂದ ನಾನು ಸಹ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುತ್ತೇನೆ.

ಅಪಘಾತವಾಗುವುದಕ್ಕಿಂತ ಮುಂಚೆ ಶಾಲೆಯ ಕರ್ತವ್ಯ ಮುಗಿಸಿಕೊಂಡು ದ್ವಿಚಕ್ರ ವಾಹನದಲ್ಲಿ ನಾನು ಮತ್ತುನನ್ನ ಸಹೋದ್ಯೋಗಿ ಕೈಲಾಸ ಬರುತ್ತಿದ್ದೇವು. ಆ ದ್ವಿಚಕ್ರವನ್ನು ನನ್ನ ಸಹೋದ್ಯೋಗಿ ಕೈಲಾಸರವರು ಚಲಾಯಿಸುತ್ತಿದ್ದರು ನಾನು ಹಿಂಬಂದಿ ಸವಾರನಾಗಿ ಕುಳಿತಿದ್ದೆ. ದೂರನ್ನು ಕೈಲಾಸ ರವರೆ ನೀಡಿರುತ್ತಾರೆ ಎಂದರೆ ಸರಿ. ಆ ದೂರನ್ನು ನಾನು ಓದಿರುತ್ತೇನೆ. ಆ ದೂರಿನಲ್ಲಿ ಯಾವುದೋ ಒಂದು ಟ್ರ್ಯಾಕ್ಟರ ಬಂದು ನಮ್ಮ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿರುತ್ತದೆ ಎಂದು ನಮೂದಿಸಿರುತ್ತದೆ ಎಂದರೆ ಸರಿ. ಆ ದೂರಿನಲ್ಲಿ ಟ್ರ್ಯಾಕ್ಟರ ನಂಬರ ಬರೆಸಿಲ್ಲ ಎಂದರೆ ಸರಿ.

ಪೊಲೀಸರು ತಮ್ಮ ಅಂತಿಮ ವರದಿಯಲ್ಲಿ ಟ್ರ್ಯಾಕ್ಟರ ಚಾಲಕನ ನಿಸ್ಕಾಳಜಿತನದ ಚಾಲನೆಯಿಂದ ಆಗಿರುತ್ತದೆ ಎಂದು ಆರೋಪ ಮಾಡಿರುತ್ತಾರೆ ಎಂದರೆ ಸರಿ. ಆ ವರದಿಯಲ್ಲಿ ಕೈಲಾಸ ಎಂಬುವವರ ನಿಸ್ಕಾಳಜಿತನದ ಚಾಲನೆಯಿಂದ ಅಪಘಾತವಾಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಅಂತಿಮ ವರದಿಯನ್ನು ಟ್ರ್ಯಾಕ್ಟರ ಚಾಲಕನ ಮೇಲೆ ಮಾತ್ರ ಹಾಕಿರುತ್ತಾರೆ ಎಂದರೆ ಸರಿ. ಆ ಪ್ರಕಾರ ಈ ಪ್ರಕರಣದಲ್ಲಿ ಟ್ರ್ಯಾಕ್ಟರನ ಮಾಲೀಕ ಮತ್ತು ಚಾಲಕನನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದರೆ ಸರಿ. ಆ ಟ್ರ್ಯಾಕ್ಟರಗೆ ಯಾವುದೇ ಇನ್ಸೂರೆನ್ಸ ಇಲ್ಲವೆಂದು ಅಂತಿಮ ವರದಿ ದಾಖಲಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ನಾವು ಚಲಾಯಿಸುತ್ತಿದ್ದ ದ್ವಿಚಕ್ರ ಮಾಲೀಕನನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದರೆ ಸರಿ.

ದೂರಿನಲ್ಲಿ ಅಪಘಾತವಾದ ದಿನಾಂಕ 17-06-2021 ಎಂದು ನಮೂದು ಇದೆ ಎಂದರೆ ಸರಿ. ಆದರೆ ಅದು ತಪ್ಪಾಗಿರುತ್ತದೆ ಎಂದು ಅರ್ಜಿಯನ್ನು ನೀಡಿ ಅಪಘಾತವಾದ ದಿನಾಂಕ 18-06-2021 ಇರುತ್ತದೆ. ದೂರನ್ನು 13 ದಿನ ತಡಮಾಡಿ ದಾಖಲಿಸಿರುತ್ತೇವೆ ಎಂದರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರಿಂದ ತಡವಾಗಿ ದಾಖಲಿಸಿರುತ್ತೇವೆ. ಕೈಲಾಸರವರಿಗೆ ಯಾವುದೇ ಗಾಯ ನೋವು

ಆಗಿರಲಿಲ್ಲ ಎಂದರೆ ಸರಿ. ಕೈಲಾಸರವರು ದೂರನ್ನು ನೀಡಬಹುದಿತ್ತು ಎಂದರೆ ಅವರು ನೀಡಿರುತ್ತಾರೆ ಆದರೆ ಪ್ರಥಮ ವರ್ತಮಾನ ವರದಿಯನ್ನು ತಡವಾಗಿ ದಾಖಲಿಸಿರುತ್ತಾರೆ. ನಾನು ಆಸ್ಪತ್ರೆಯಿಂದ ಬಿಡುಗಡೆ ಆದ 3 ದಿನದ ನಂತರ ದೂರನ್ನು ಕೈಲಾಸರವರು ನೀಡಿರುತ್ತಾರೆಂದರೆ ಸರಿ. ಅಪಘಾತ ಟ್ರ್ಯಾಕ್ಟರ ತಪ್ಪಿನಿಂದ ಮಾತ್ರ ಆಗಿರುತ್ತದೆ ಹೊರತು ದ್ವಿಚಕ್ರ ವಾಹನದಿಂದಲ್ಲ ಎಂದರೆ ಸರಿ. ಆದರೆ ದ್ವಿಚಕ್ರ ವಾಹನ ಜಕ್ಕಂ ಗೊಂಡಿರುತ್ತದೆ. ಈ ಅಪಘಾತದ ಪರಿಹಾರವನ್ನು ನೀಡಲು 1 ಮತ್ತು 2ನೇ ಎದುರುದಾರರ ಭಾದ್ಯತೆ ಇರುತ್ತದೆ ಎಂದರೆ ಸರಿ.

3 ಮತ್ತು 4ನೇ ಎದುರುದಾರರು ಯಾವುದೇ ಅಪಘಾತ ಪರಿಹಾರವನ್ನು ನೀಡಲು ಭಾದ್ಯಸ್ತರಲ್ಲ ಎಂದರೆ ಸರಿ. ಆದರೆ ದ್ವಿಚಕ್ರ ವಾಹನ ಜಕ್ಕಂ ಆಗಿದ್ದರಿಂದ ಅವರು ಪರಿಹಾರ ನೀಡಲು ಬಾದ್ಯಸ್ತರಾಗಿರುತ್ತಾರೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.